MVC No. 536/2017 PW-1

<u>ದಿನಾಂಕ **14.12.2023** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಃ ಎದುರುದಾರರಾದ ಆರ್ **2** ಪರ ವಕೀಲರಿಂದ ಃ</u>

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ನಾನು ಹೆಚ್ ಎ ಎಲ್ ಕೆಲಸ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ನನಗೆ ತಿಂಗಳಿಗೆ 15 ಸಾವಿರ ರೂಪಾಯಿ ಸಂಬಳ ಕೊಡುತ್ತಿದ್ದ ಬಗ್ಗೆ ನನ್ನ ಸಂಬಳದ ವೇತನ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಹೆಚ್ ಎ ಎಲ್ ನಲ್ಲಿ ಉಡ್ ವರ್ಕ್ ಅನ್ನು ಕಾಂಟ್ರಾಕ್ಟ್ ಆಧಾರದ ಮೇಲೆ ಕೆಲಸ ಮಾಡುತ್ತಿದ್ದೆ. 2 ವರ್ಷಕ್ಕೆ ಕಾಂಟ್ರಾಕ್ಟ್ ಇತ್ತು. ಅಪಘಾತವಾದ ಸಮಯದಲ್ಲಿ ನಾನು ಕೆಲಸಕ್ಕೆ ಸೇರಿ 1 ವರ್ಷ 8 ತಿಂಗಳು ಆಗಿತ್ತು. ನನಗೆ ಅಪಘಾತವಾದ ನಂತರ ಕೆಲಸಕ್ಕೆ ಹೋಗಲು ಆಗಲಿಲ್ಲ. ಅಪಘಾತವಾದ ಸಮಯದಲ್ಲಿ ನಮ್ಮ ಕಾಂಟ್ರಾಕ್ಟ್ ಅವಧಿ ಮುಗಿದುಹೋಗಿತ್ತು ಆದ್ದರಿಂದ ಸದರಿ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ದಿನ ನಾನು ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದೆ. ನನಗೆ ಅಪಘಾತಪಡಿಸಿದ ಲಾರಿಯ ನೊಂದಣಿ ಸಂಖ್ಯೆ ಗೊತ್ತು. ಸದರಿ ನೊಂದಣಿ ಸಂಖ್ಯೆ 7125 ಆಗಿತ್ತು. ನೋಂದಣಿ ಸಂಖ್ಯೆಯನ್ನು ಅಪಘಾತವಾದ ಸಮಯದಲ್ಲಿ ನೋಡಿರುತ್ತೇನೆ. ಸದರಿ ವಾಹನವನ್ನು ಯಾರು ಚಾಲನೆ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಅಪಘಾತ ನಾನು ಅಡ್ಡಾದಿಡ್ಡಿಯಾಗಿ ರಸ್ತೆ ದಾಟಿದ್ದರಿಂದ ನನ್ನ ಅಜಾಗರುಕತೆಯಿಂದ ಆಗಿರುತತದೆ ಎಂದರೆ ಸರಿಯಲ್ಲ. ಸದರಿ ಅಪಘಾತವನ್ನು ಕಣ್ಣಾರೆ ನೋಡಿದ ಸಾಕ್ಷಿದಾರರನ್ನು ನ್ಯಾಯಾಲಯಕ್ಕೆ ಕರೆಯಿಸಿ ಸಾಕ್ಷ್ಯಾ ನುಡಿಸಲು ತೊಂದರೆ ಇಲ್ಲ. ನಾನು ಅಪಘಾತಕ್ಕೆ ಆದ ಗಾಯಗಳಿಗೆ ಸಂಬಂದಪಟ್ಟಂತೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನನ್ನ ಬಳಿ ಬಿ ಪಿ ಎಲ್ ಕಾರ್ಡ್ ಇದೆ ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಚಿಕಿತ್ಸೆ ಕೊಡತ್ತಾರೆಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ನನ್ನ ವೈದ್ಯಕೀಯ ಚಿಕಿತ್ಸೆಗಾಗಿ 3 ಲಕ್ಷ ರೂಪಾಯಿ ಹಣ ಖರ್ಚಾಗಿದೆ ಎಂದು ಹೇಳಿದ್ದು ಅದು ಸುಳ್ಳು

ಮತ್ತು ಆ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಶಸ್ತ್ರ ಚಿಕಿತ್ಸೆ ನೀಡಿದ ವೈದ್ಯರನ್ನು ನ್ಯಾಯಾಲಯಕ್ಕೆ ಕರೆಯಿಸಿ ಸಾಕ್ಷ್ಯಾ ನುಡಿಸಲು ತೊಂದರೆ ಇಲ್ಲ. ನನಗೆ ಈ ಅಪಘಾತದಿಂದ ನನಗೆ ಯಾವುದೇ ರೀತಿಯ ಆರ್ಥಿಕವಾಗಿ ನಷ್ಟ ಉಂಟಾಗಿಲ್ಲ ಮತ್ತು ದೈಹಿಕವಾಗಿ ನಷ್ಟ ಉಂಟಾಗಿಲ್ಲ ನಾನು ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಅರ್ಜಿ ಹಾಕಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

(ಶುಭಾ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.